ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್
ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com    e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
SJ
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್
ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 26 ॥ ಸಂಚಿಕೆ : 14॥ Udp/1263/2015-17 || R.NO.50495/91 ॥ ತಾರೀಕು : 19–04–2016 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## ಸುಧಾ ಸೇವಾ ಸಮ್ಮೇಳನಕ್ಕೆ ಕಾರ್ಕಳದಲ್ಲಿ ಸಂಭ್ರಮದ ಸಿದ್ಧತೆ

ಶ್ರೀ ಕಾಶೀಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಗೌಡ ಸಾರಸ್ವತ ಸಮಾಜ ಬಾಂಧವರ ಸುಧಾ ಸೇವಾ ಸಮ್ಮೇಳನ ದಿ.22 ಹಾಗೂ 23 ರಂದು ನಡೆಯಲಿದೆ.

ಕಾರ್ಕಳದ ಶ್ರೀ ವೆಂಕಟರಮಣ ದೇವಸ್ಥಾನದ ಎದುರು ಇರುವ ಶೇಷತೀರ್ಥದ ಬಳಿಯ ವಿಶಾಲವಾದ ಸ್ಥಳ ಸುಧೀಂದ್ರ ನಗರದಲ್ಲಿ ಈ ಸಮ್ಮೇಳನ ನಡೆಯಲಿದ್ದು ಸಮ್ಮೇಳನದ ಯಶಸ್ಸಿಗಾಗಿ ಸಂಭ್ರಮದ ಸಿದ್ಧತೆ ನಡೆದಿದೆ. ಸುಮಾರು 15 ಸಾವಿರ ಮಂದಿ ಜಿ.ಎಸ್.ಬಿ. ಬಾಂಧವರು ದೇಶವಿದೇಶಗಳಿಂದ ಈ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಸಮ್ಮೇಳನದಲ್ಲಿ ಗೌಡಸಾರಸ್ವತ ಸಮಾಜದ ಯುವ ಜನತೆಗೆ ಪ್ರೇರಣೆ ನೀಡುವ ಹಾಗೂ ಸಮಾಜದ ಮುನ್ನಡೆಗೆ ಮಾಹಿತಿ ಮಾರ್ಗದರ್ಶನ ನೀಡುವ ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ತಾ.22 ರಂದು ಶುಕ್ರವಾರ ಸುಧಾ ಸೇವಾ ಸಮ್ಮೇಳನದ ಉದ್ಘಾಟನೆ ಸಂಜೆ 4 ಗಂಟೆಗೆ ನಡೆಯಲಿದ್ದು ಇನ್‌ಫೋಸಿಸ್‌ನ ಎಕ್ಸಿಕ್ಯೂಟಿವ್ ವೈಸ್ ಪ್ರೆಸಿಡೆಂಟ್ ರಾಮದಾಸ್ ಕಾಮತ್ ಯು. ವಿಚಾರ ಸಂಕಿರಣ ಉದ್ಘಾಟನೆ ನಡೆಸಲಿದ್ದಾರೆ. ಜ್ಯೋತಿ ಲೆಬೊರೆಟರೀಸ್‌ನ ಜಾಯಂಟ್ ಮೆನೇಜಿಂಗ್ ಡೈರೆಕ್ಟರ್ ಉಲ್ಲಾಸ ಕಾಮತ್ ವಸ್ತುಪ್ರದರ್ಶನ ಉದ್ಘಾಟಿಸಲಿದ್ದಾರೆ. ತರಂಗ ವಾರ ಪತ್ರಿಕೆಯ ನಿರ್ವಾಹಕ ಸಂಪಾದಕರಾದ ಶ್ರೀಮತಿ ಸಂಧ್ಯಾ ಪೈ ಪ್ರಧಾನ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಮಾರಂಭದ ಆಧ್ಯಕ್ಷತೆಯನ್ನು ಶ್ರೀ ವೆಂಕಟರಮಣ ದೇವಸ್ಥಾನ ಕಾರ್ಕಳದ ಒಂದನೇ ಮೊಕ್ತೇಸರ ಜಯರಾಮ ಪ್ರಭು ವಹಿಸಲಿದ್ದಾರೆ.

ತಾ.23 ರಂದು ಶನಿವಾರ ಉಪಯುಕ್ತ



ವಿಚಾರ ಸಂಕಿರಣಗಳು ನಡೆಯಲಿದ್ದು ಅಧ್ಯಯನಮ್ ವಿಚಾರಣ ಸಂಕಿರಣದಲ್ಲಿ ಹಲವು ತಜ್ಞರು ವೃತ್ತಿ ಮಾರ್ಗದರ್ಶನ ನೀಡಲಿದ್ದಾರೆ.

ಉದ್ಯೋಗ ವಿಚಾರ ಸಂಕಿರಣದಲ್ಲಿ ಯಶಸ್ವಿ ವ್ಯವಹಾರಸ್ಥರು ಸಂಪನ್ಮೂಲ ವ್ಯಕ್ತಿಗಳು ಮಾಹಿತಿ ನೀಡಲಿದ್ದಾರೆ. ವಿವಿಧ ಕಂಪೆನಿಗಳಿಂದ ಯುವಕರ ಸಂದರ್ಶನ ನಡೆಯಲಿದೆ. ಆಹ್ಲಾದನಂ ಕಾರ್ಯಕ್ರಮದಲ್ಲಿ ಛಾಯಾ ಚಿತ್ರ ಗ್ರಹಣ ಕಾರ್ಯಾಗಾರ ನಡೆಯಲಿದ್ದು , ಶ್ರೀ ಸುಧೀಂಧ್ರ ತೀರ್ಥ ಸ್ವಾಮೀಜಿಯವರ ಛಾಯಾ ಚಿತ್ರಗಳ ಪ್ರದರ್ಶನ ನಡೆಯಲಿದೆ. ಸ್ತ್ರೀ ಪ್ರಗತಿ ವಿಚಾರ ಸಂಕಿರಣದಲ್ಲಿ ಸ್ವ ಉದ್ಯೋಗ ಮಹಿಳೆ ಮತ್ತು ಮಕ್ಕಳ ಆರೋಗ್ಯ ಕೌಟುಂಬಿಕ ಸಾಮರಸ್ಯ ವಿಷಯಗಳಲ್ಲಿ ಮಹಿಳಾ ಸಂಪನ್ಮೂಲ ತಜ್ಞರು ಮಾತಾಡಲಿದ್ದಾರೆ.

ಆರೋಗ್ಯಮ್ ಕಾರ್ಯಕ್ರಮದಲ್ಲಿ ಖ್ಯಾತ ಯೋಗ ಪಟು ರಾಘವೇಂದ್ರ ಪೈ ಅವರಿಂದ ಶ್ರೀನಿವಾಸ ಕಲಾಮಂದಿರದಲ್ಲಿ ಬೆಳಿಗ್ಗೆ 6 ಗಂಟೆಗೆ ಯೋಗ ಕಾರ್ಯಾಗಾರ ನಡೆಯಲಿದೆ. ವೈದ್ಯಕೀಯ ಶಿಬಿರ, ಆರೋಗ್ಯ ಕಾರ್ಡ್‌ಗಳ ನೋಂದಣಿ, ನಡೆಯಲಿದೆ. ಸಂಸ್ಕೃತಿ ಕಾರ್ಯಕ್ರಮದಲ್ಲಿ ಬಾಲ ಶಿಬಿರ , ಸಂಸ್ಕೃತಿ ಪರಂಪರೆಗಳ ಬಗ್ಗೆ ಮಾಹಿತಿ ಕಾರ್ಯಕ್ರಮ ನಡೆಯಲಿದೆ. ಕೊಂಕಣಿ ಭಾಷೆಯ ವಿಚಾರದಲ್ಲಿ ಮಾಹಿತಿ ನೀಡಲಾಗುತ್ತದೆ.

ಸುಧಾ ಸೇವಾ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಂಜೆ 5.30ಕ್ಕೆ ಶ್ರೀ ಕಾಶೀಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರು ಆಶೀರ್ವಚನ ಮಾಡಲಿದ್ದಾರೆ. ಎರಡು ದಿನಗಳ ಸಮಾರಂಭದಲ್ಲಿ ಜಿ.ಎಸ್.ಬಿ.ಸಮಾಜ ಬಾಂಧವರು ಪಾಲ್ಗೊಂಡು ಕಾರ್ಯಕ್ರಮಗಳ ಉಪಯೋಗ ಪಡೆದುಕೊಳ್ಳಬೇಕೆಂದು ಹಾಗೂ ಶ್ರೀ ಕಾಶೀಮಠಾಧೀಶರ ಆಶೀರ್ವಚನ ಪಡೆಯಬೇಕೆಂದು ಸುಧಾ ಸೇವಾ ಸಮಿತಿ ವಿನಂತಿಸಿದೆ.

